ಪ್ರಿನ್ಸಿಪಾಲ್ ಡಾ. ಅಂಕಿತನ ಕರೆ. 'ಐಸಿಎಸ್ಸಿ ಸಿಲೆಬಸ್' ಎಂದು ನೆನಪಿಸಿಕೊಳ್ಳುತ್ತಲೇ... ಕುಮುದಳ ಅಂತರಂಗದ ವ್ಯಾಪಾರಗಳೆಲ್ಲ ಒಂದರೆ ಗಳಿಗೆ ಏರುಪೇರಾದವು. ತನ್ನ ಗಂಡನನ್ನು ಮತ್ತು ಮಗುವನ್ನುಆದಷ್ಟು ಬೇಗ ತನ್ನ ಐಸಿಎಸ್ಸಿ ಸಿಲೆಬಸ್ ಖೆಡ್ಡದೊಳಗೆ ಸಿಲುಕಿಸಲು ಮತ್ತೆ ಈತ ಕರೆ ಮಾಡಿದ್ದಾನೆ ಎಂದು ಆಕೆ ಮನಸ್ಸಲ್ಲೇ ಆತನ ಬಗ್ಗೆ ಹಲ್ಲು ಮಸೆದು, ಗಂಡನನ್ನು ಒಂದರೆ ಗಳಿಗೆ ಉರಿದಿಟ್ಟಿಯಲ್ಲೇ ಮಸೆದಳು. ಅಕ್ಷಯಕುಮಾರ ಆ ದಿಟ್ಟಿಗೆ ಸೊಪ್ಪು ಹಾಕದೆ ಅಂದ:

'Sorry ಸರ್, ನಾನು ಸೆಲ್ ಮ್ಯೂಟ್ ಮಾಡ್ಬೇಕಿತ್ತು... ಅವಸರದಲ್ಲಿ ಮರೆತೆ... ಕ್ಷಮಿಸಿ, ನನ್ಮಗನ ಬಗ್ಗೆ ಹೇಳಿ ಸರ್, ಪ್ಲೀಸ್...'

'ಇನ್ನೇನು ಹೇಳುವುದಿದೆ... ಅಕ್ಷಯಕುಮಾರ್; ನೋಡಿ... ನಮ್ಮ ಹಳೆಯ ಹೊಡೆತ–ನೋವು –ಅವಮಾನಗಳ ಗಾಯದ ಕಲೆಗಳನ್ನು ಮತ್ತೆ ಮತ್ತೆ ನೆಕ್ಕಿ ದುಃಖಿಸುವುದರಲ್ಲಿ ಏನು ಅರ್ಥವಿದೆ ಹೇಳಿ?... ನಿಮ್ಮ ಬದುಕಲ್ಲಿ ಸಾಧಿಸಲಾಗದ್ದನ್ನು... ನಿಮ್ಮ ಮಗ ಸಾಧಿಸ್ಬೇಕು ಅನ್ನುವ ಹಟದ ಗೀಳನ್ನು ನೀವು ಖಂಡಿತ ಹಚ್ಕೋಬಾರ್ದು. ನಮ್ಮ ಪ್ರಕಾರ ಅದೂ ಒಂಥರಾ ಹುಚ್ಚೇ. ನಿಮ್ಮ ಮಗ ಖಂಡಿತ ಮಗ್ಗಿಯ ದಾಸನಲ್ಲ, ಆತ ಈ ಸುಂದರ ಪ್ರಕೃತಿಯ ದಾಸ. ನೋಡಿ... ಓ ಅಲ್ಲಿ ನೀವೇ ನೋಡಿ... ಆತ ಮರದಡಿ ಕೂತು ಎಷ್ಟು ತನ್ಮಯನಾಗಿ ಚಿತ್ರ ಬರಿತಿದ್ದಾನೆ ನೋಡಿ; ಅದು ಅವನದ್ದೇ ಜಗತ್ತು.'

ಡಾ. ವಾಹೀದ್ ಅವರ ಮಾತು ಇನ್ನೂ ಮುಗಿದಿರಲಿಲ್ಲ... ಆದರೆ ಅಷ್ಟರಲ್ಲಿ ಬಾಲವನದ ದೊಡ್ಡ ಗೇಟು ಕಿರ್ರೆಂದು ಸದ್ದು ಮಾಡಿತ್ತು. ಕಾರಿನಿಂದ ಇಳಿದು ಗೇಟು ತೆಗೆದವಳು ಬೇರೆ ಯಾರೂ ಅಲ್ಲ ; ಖ್ಯಾತ ಮನಃಶಾಸ್ತ್ರಜ್ಞೆ ಡಾ. ಸ್ವಪ್ನ ಹೆಗ್ಡೆ. ಡಾ. ವಾಹೀದ್ ಅವರು ಕೂತಲ್ಲೇ ಕೈಬೀಸಿ 'ಇಲ್ಲೇ ಬನ್ನಿ ಸ್ವಪ್ನ' ಎಂದು ತುಳುವಿನಲ್ಲೇ ಕರೆದರು. ಅಕ್ಷಯಕುಮಾರ ಆ ಗಳಿಗೆಯಲ್ಲಿ ಅಲ್ಲಿ ತನ್ನ 'ಸೊಪ್ಪಿ'ಯನ್ನು ಕಂಡು ಒಂಥರಾ ಗಲಿಬಿಲಿಗೊಂಡು ಪೆಚ್ಚಾದ. ಸ್ವಪ್ನ ಆತನ ಹತ್ತಿರ ಬಂದವಳೇ 'ಸರ್... ಈ ಬೆರ್ಚಪ್ಪನ ಹುಚ್ಚನ್ನು ಮೊದಲು ಬಿಡ್ಸಿ ಸರ್, ನಂತ್ರ ಬೇರೆಯವರದ್ದು' ಎಂದು ಹೇಳಿ, ಅಕ್ಷಯಕುಮಾರನ ತಲೆಗೊಂದು ಮೊಟಕಿದ್ದಳು. ತನ್ನ ಅಪ್ಪನ ತಲೆಗೆ ಮೊಟುವವರೂ ಈ ಜಗತ್ತಿನಲ್ಲಿದ್ದಾರಲ್ವೇ – ಎಂಬ ಖುಷಿಯಿಂದಲೋ ಏನೋ, ಕೌಶಿಕ ಅಲ್ಲಿಂದಲೇ ಬಾರೀ ಧೈರ್ಯದಿಂದ 'ನಮಸ್ತೇ ಮಿಸ್' ಎಂದು ಗಟ್ಟಿಯಾಗಿ ಉಲಿದ.

'ಹೌದು ಮಾರಾಯ... ಇವ್ರು ನಿಮ್ಮ ಅಪ್ಪನ ಟೀಚರೇ' ಎಂದು ಡಾ. ವಾಹೀದ್ ಅವರು ಹೇಳುತ್ತ ಕೌಶಿಕನನ್ನು ಕೈ ಭಾಷೆಯಲ್ಲೇ ತನ್ನ ಬಳಿಗೆ ಕರೆದರು. ಅಷ್ಟರಲ್ಲೇ ಸ್ವಪ್ನ ಹೆಗ್ಡೆಯ ಎಕ್ಸರೇ ಕಣ್ಣು ಅಕ್ಷಯಕುಮಾರನ ಹೆಂಡತಿಯ ಮೈಕಟ್ಟಿನತ್ತ ಹರಿದಿತ್ತು. ವೈದ್ಯೆ ಗೆಳತಿಯ ಕೆಂಗಣ್ಣಿಗೆ ಅಕ್ಷಯಕುಮಾರ ತಕ್ಷಣ ಬಲಿಯಾದ. 'ನಿನ್ನ ಈ ಮಗನ ಸ್ಥಿತಿಯೇ ಹೀಗಿರುವಾಗ ಎರಡನೇ ಮಗು ಬೇಕಾಗಿತ್ತೇನೋ... ನಿಂಗೆ ಬೆರ್ಚಪ್ಪ...' ಎಂದು ಅಕ್ಷಯಕುಮಾರನತ್ತ ರಪ್ಪನೆ ಎಸೆಯಬೇಕಾದ ಪ್ರಶ್ನೆಯನ್ನು, 'ಈಗ ಬೇಡ' ಎಂದು ಆಕೆ ಹಾಗೆಯೇ ಎದೆಯೊಳಗೆ ಉಳಿಸಿಕೊಂಡಳು ಸ್ವಪ್ನ. ಕೌಶಿಕ ಈಗ ಸರಿಹೋಗಿರುವ ಖುಷಿಯನ್ನು ಸ್ವಪ್ನಳ ಜೊತೆ ಹಂಚಿಕೊಳ್ಳಬೇಕೆಂದು ಬಾಯ್ತುರೆಯಬೇಕೆಂದುಕೊಂಡ ಅಕ್ಷಯ್‌ಕುಮಾರ ಅವಳ ಉರಿನೋಟ ಕಂಡು ಅಲ್ಲಿಗೇ ಸುಮ್ಮನಾಗಿದ್ದ. ಕೌಶಿಕ ಅಷ್ಟರಲ್ಲೆ ಕತ್ತೆಯ ಚಿತ್ರ ಬರೆದು ಮುಗಿಸಿದ್ದ. ಕತ್ತೆಯ ಬಾಲದಲ್ಲಿ 'ತ್ರೀ ಫೋರ್ ಝೀರೋ ನೈನ್' ಎಂದು ಬರೆದಿದ್ದ –ಅಂಕೆಯಲ್ಲಿ. ಆ 'ನೈನ್' ಕಂಡ ಅಕ್ಷಯಕುಮಾರನ ಮುಖ ಬಾಡಿದ ಬಸಳೆಯಂತಾಗಿತ್ತು.

(ಮುಗಿಯಿತು)